**<u>ಗೌರವಾನ್ವಿತ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ ನ್ಯಾಯಾಲಯ, ಅರಕಲಗೂಡು.</u>**

**<u>ದಿನಾಂಕಃ</u> 01.07.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**<u>ಪಾಟೀ ಸವಾಲುಃ</u>** ಪ್ರತಿವಾದಿ ಪರ ವಕೀಲರು **ಶ್ರೀ.ಆರ್ ಕೆ ಎಂ** ರವರಿಂದ.

ನನ್ನ ತಂದೆ ಜೊತೆ ಒಟ್ಟು 08 ಜನ ಹುಟ್ಟಿರುತ್ತಾರೆ. ಅದರ ಪೈ 06 ಜನ ಗಂಡು ಮಕ್ಕಳು , ಇಬ್ಬರು ಹೆಣ್ಣು ಮಕ್ಕಳು. ನನ್ನ ತಾತ ತಿರುಮಲೇಗೌಡ ರವರಿಗೆ ಒಟ್ಟು ಎಷ್ಟು ಆಸ್ತಿ ಇತ್ತು ಎಂಬುದು ನನಗೆ ತಿಳಿದಿಲ್ಲ. ದಾವಾ ಸ್ವತ್ತುಗಳು ನನ್ನ ತಾತನ ಆಸ್ತಿಗಳು. ದಾವಾ ಸ್ವತ್ತುಗಳು ನನ್ನ ತಂದೆಗೆ ಹಿಸ್ಸೆ ಮೂಲಕ ನನ್ನ ತಾತನಿಂದ ಬಂದಿರುತ್ತದೆ. ನನ್ನ ದೊಡ್ಡಪ್ಪಂದಿರು ಮತ್ತು ಅತ್ತೆಯಂದಿರು ಯಾವ ಇಸವಿಯಲ್ಲಿ ಹಿಸ್ಸೆ ಮಾಡಿಕೊಂಡಿರುತ್ತಾರೆಂಬುದು ನನಗೆ ತಿಳಿದಿರುವುದಿಲ್ಲ. ಹಿಸ್ಸೆಯನ್ನು ಬಾಯಿ ಮಾತಿನ ಮೂಲಕ ಮಾಡಿಕೊಂಡಿರುತ್ತಾರೆ. ನನ್ನ ತಂದೆಯಿಂದ ನನಗೆ ಹಿಸ್ಸೆ ಆಗಿರುವ ವಿಷಯ ತಿಳಿದಿರುತ್ತದೆ. ನಮ್ಮ ತಾತನಿಂದ ನನ್ನ ತಂದೆಗೆ ಒಂದು ಮನೆಯಲ್ಲಿ ಒಂದನೇ ಆರು ಭಾಗ ಮತ್ತು ಆರು ಸರ್ವೆ ನಂಬರ್ ಗಳ ಜಮೀನುಗಳು ಬಂದಿರುತ್ತದೆ. ಸದರಿ ಮನೆಯು ಹೆಗ್ಗಳ್ಳಿ ಗ್ರಾಮದಲ್ಲಿರುತ್ತದೆ. ನಮ್ಮ ಕುಟುಂಬಕ್ಕೆ ಅಂದರೆ ನನ್ನ ಸಹೋದರರು ಮತ್ತು ತಾಯಿಗೆ ಈಗ ಮೂರು ಮನೆಗಳು ಇರುತ್ತವೆ. ಸದರಿ ಮೂರು ಮನೆಗಳು ನನ್ನ ತಾಯಿ ಹೆಸರಿನಲ್ಲಿರುತ್ತದೆ. ನನ್ನ ತಂದೆಗೆ ಬಂದಂತಹ 1/6 ನೇ ಭಾಗ ಮನೆಯು ನನ್ನ ತಾಯಿ ಹೆಸರಿನಲ್ಲಿರುತ್ತದೆ. ನಮ್ಮ ತಾತನಿಂದ ಬಂದ ಆಸ್ತಿಗಳ ಪೈಕಿ 1/6 ಭಾಗ ಮನೆ ಯು ನನ್ನ ತಾತನ ಹೆಸರಿನಲ್ಲಿರುತ್ತದೆ.

ನನ್ನ ತಂದೆಗೆ ಇಬ್ಬರು ಗಂಡು ಮಕ್ಕಳು. ಹೆಣ್ಣು ಮಕ್ಕಳು ಇರುವುದಿಲ್ಲ. 1986-87 ರಿಂದ ನಾನು , ನನ್ನ ತಮ್ಮ ಮತ್ತು ತಾಯಿ ಬೇರೆಯಾಗಿರುತ್ತೇವೆ. ನಾನು ಮತ್ತು ನನ್ನ ತಮ್ಮ ಒಂದೇ ಮನೆಯನ್ನು ಭಾಗ ಮಾಡಿಕೊಂಡಿರುತ್ತೇವೆ. ನನ್ನ ತಾಯಿ ಊರಿನಲ್ಲಿ ನನ್ನ ತಂದೆಗೆ ಹಿಸ್ಸೆಗೆ ಬಂದ ಮನೆಯಲ್ಲಿ ವಾಸವಿರುತ್ತಾರೆ. ನಾನು ಮತ್ತು ನನ್ನ ತಮ್ಮ 2ನೇ ಪ್ರತಿವಾದಿ ಈಗ ವಾಸವಿರುವ 02 ಮನೆಗಳು ನನ್ನ ತಾಯಿ ಹೆಸರಿನಲ್ಲಿರುತ್ತವೆ. ಸದರಿ ಮನೆಗೆ ನಾವು ವಿದ್ಯುತ್ ಸಂಪರ್ಕ ಮತ್ತು ನೀರಿನ ಸಂಪರ್ಕ ಪಡೆದಿರುತ್ತೇವೆ ಮತ್ತು ಅದಕ್ಕೆ ನಾವು ಕಂದಾಯ ಕಟ್ಟುತ್ತಿರುತ್ತೇವೆ. ನಾವು ಇರುವ ಮನೆಗೆ ನಾನು ಕಂದಾಯ ಕಟ್ಟುತ್ತಿರುತ್ತೇನೆ. ನನ್ನ ತಮ್ಮ ಕಂದಾಯವನ್ನು ಹೇಗೆ

ಕಟ್ಟುತ್ತಿರುತ್ತಾರೆಂಬುದು ನನಗೆ ತಿಳಿದಿಲ್ಲ. ನನ್ನ ತಂದೆಗೆ ಹಿಸ್ಸೆ ಬಂದಿರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ ಹಾಗಾದರೆ ಯಾರಿಗೆ ಯಾವ ಜಮೀನು ಬಂದಿರುತ್ತದೆ ಎಂದರೆ ಸಾಕ್ಷಿಯು ಜಮೀನುಗಳನ್ನು ನನಗೆ ನೀಡಿರುವುದಿಲ್ಲ ಎಂದು ನುಡಿಯುತ್ತಾರೆ. 1985 ರಲ್ಲಿ ನಾನು ನನ್ನ ತಾಯಿಯನ್ನು ಹಿಸ್ಸೆ ಕೋರಿದ್ದು ನನ್ನ ತಾಯಿ ನಾನು ಇರುವವರೆಗೂ ಹಿಸ್ಸೆ ಕೊಡುವುದಿಲ್ಲ ಎಂದು ಹೇಳಿರುತ್ತಾರೆ.

ನನ್ನ ತಂದೆ ಸುಮಾರು 50 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ. ದಿಃ 15.11.18 ರಂದು ನನ್ನ ತಾಯಿ ಏಕಪಕ್ಷೀಯ ವಿಭಾಗಪತ್ರವನ್ನು ನನ್ನ ತಮ್ಮನಿಗೆ ಬರೆದುಕೊಟ್ಟಿರುತ್ತಾರೆ ಎಂದರೆ ನನಗ ಅದರ ಬಗ್ಗೆ ತಿಳಿದಿರುವುದಿಲ್ಲ. ಸದರಿ ಏಕಪಕ್ಷೀಯ ವಿಭಾಗಪತ್ರದ ಆದಾರದ ಮೇಲೆ 2ನೇ ಪ್ರತಿವಾದಿ ಖಾತೆ ವರ್ಗವಣೆಗೆ ಬಂದು ತಾಲ್ಲೂಕು ಕಛೇರಿಗೆ ಅರ್ಜಿ ಹಾಕಿದ್ದು ಆಗ ನಾನು ತಕರಾರನ್ನು ಹಾಕಿರುತ್ತೇನೆ. ತಕರಾರು ಹಾಕಿದ ನಂತರ ನನಗು ಮತ್ತು 2ನೇ ಪ್ರತಿವಾದಿಗು ನೋಟೀಸ್ ಬಂದಿರುತ್ತದೆ ಎಂದರೆ ಸಾಕ್ಷಿಯು ನನಗೆ ನೋಟೀಸ್ ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. ನಂತರ ದಿಃ 17.06.19 ರಂದು ವಿಚಾರಣೆ ಮಾಡಿದ್ದು ನನ್ನ ತಮ್ಮನಾದ 2ನೇ ಪ್ರತಿವಾದಿ ಪರ ಆದೇಶವಾಗಿರುತ್ತದೆ ಎಂದರೆ ನನಗೆ ಅದರ ಬಗ್ಗೆ ತಿಳಿದಿರುವುದಿಲ್ಲ. ದಿಃ 15.11.18 ರಂದು ಆದ ನೊಂದಾಯಿತ ವಿಭಾಗ ಪತ್ರದ ಆದಾರದ ಮೇಲೆ ಖಾತೆ ವರ್ಗಾವಣೆಯಾಗಿದ್ದು ನನ್ನ ತಮ್ಮ ಅವರಿಗೆ ಬಂದ ಆಸ್ತಿಗಳ ಸ್ವಾದೀನದಲ್ಲಿರುತ್ತಾರೆ ಎಂದರೆ ಸರಿ. ಸದರಿ ಏಕಪಕ್ಷೀಯ ವಿಭಾಗಪತ್ರದ ಬಗ್ಗೆ ನಾನು ನನ್ನ ವಕೀಲರಿಗೆ ಈ ದಾವೆ ಹಾಕುವ ಕಾಲಕ್ಕೆ ಹೇಳಿರುತ್ತೇನೆ.

1985-86 ರಲ್ಲಿ ನನ್ನ ಮತ್ತು ಪ್ರತಿವಾದಿಗಳ ವಿರುದ್ದ ಹಿಸ್ಸೆ ಆಗಿದ್ದು ಸದರಿ ಹಿಸ್ಸೆಯಿಂದ ನನ್ನ ಪಾಲಿಗೆ ನಾನು ಈಗ ವಾಸವಿರುವ ಮನೆ , ಸರ್ವೆ ನಂ. 53/2 ರಲ್ಲಿ 0.13 ಗುಂಟೆ ಮತ್ತು ಸರ್ವೆ ನಂ. 50/11 ರಲ್ಲಿ 0.36 ಗುಂಟೆ ನನ್ನ ಹಿಸ್ಸೆಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ನಾನು ಈಗ ವಾಸವಿರುವ ಮನೆಯು ಬೆಲೆ ಬಾಳುವ ಮನೆಯಾಗಿರುವ ಕಾರಣ ಈ ದಾವೆಯಲ್ಲಿ ಸದರಿ ಮನೆಯನ್ನು ಸೇರಿಸಿರುವುದಿಲ್ಲ ಎಂದರೆ ಸಾಕ್ಷಿಯು ನಾನು ಸದರಿ ಮನೆಯನ್ನು ಈ ದಾವೆಯಲ್ಲಿ ಸೇರಿಸಿರುತ್ತೇನೆಂದು ಹೇಳುತ್ತಾರೆ. ದಾವಾ ಸ್ವತ್ತುಗಳು ನನ್ನ ತಾಯಿಯಾದ 1ನೇ ಪ್ರತಿವಾದಿಯ ಸ್ವಯಾರ್ಜಿತ ಸ್ವತ್ತು ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳ ಮೇಲೆ ನನಗೆ ಯಾವುದೇ ಹಕ್ಕು ಇರುವುದಿಲ್ಲ ಆದರೂ ಪ್ರತಿವಾದಿಗಳಿಗೆ ತೊಂದರೆ ಕೊಡುವ ದುರುದ್ದೇಶದಿಂದ ಅವರ ರುದ್ದ ಸುಳ್ಳು ದಾವೆಯನ್ನು ಹಾಕಿ ಸುಳ್ಳು ಸಾಕ್ಷಿ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ.

(ಸಾಕ್ಷಿಯ ಹೇಳಿಕೆ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿಯಿದೆ.

**ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಧೀಶರು,**
**ಅರಕಲಗೂಡು.**